# ಒಡೆದ ಮನೆಯಲ್ಲಿ ಹೊಸ ಜೀವದ ಅಳು-ನಗುವಿನ ಅನುರಣನ

‘ತನ್ನ ಚಂದ ನೋಡಿ ಈ ಸಂಬಂಧ ಕುದುರಿದ್ದು’ ಎಂದು ಅವಳಿಗೆ ಭ್ರಮೆ ಹತ್ತಿಕೊಂಡಿತ್ತು. ಕೋಡು ಮುರಿಯಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ಹುಡುಗಿ ನೆಲದ ಮೇಲೆ ನಡೆಯದೆ ಆಕಾಶದಲ್ಲಿ ಸಂಚರಿಸುತ್ತಿದ್ದುದನ್ನು ಕಂಡು ವಿಧಿ ಬೆನ್ನ ಹಿಂದೆ ಪಕಪಕ ನಕ್ಕಿರಬಹುದು. ಆಯ್ತಾ, ‘ಬಂದ ದಾರಿಗೆ ಸುಂಕ ಇಲ್ಲ’ ಎಂದು ಮತ್ತೆ ಗಂಡನ ಮನೆ ಸೇರಿಕೊಂಡಿದ್ದಾಯ್ತಾ, ಗಂಡನ ಮುಖ ನೋಡಿದರೆ ಹೀಕರಿಸಿದಂತಾಗುತ್ತಿತ್ತಂತೆ ದೇವಕಿಗೆ. ವಿಧಿ ಇಲ್ಲ, ಸೈಸಿಕೊಂಡಿದ್ದಳು. ಹಿರೀ ವಾರಗಿತ್ತಿಗೆ ತಿಂಗಳುಗಟ್ಟಲೆ ತೌರಿಗೆ ಹೋಗಿ ಕೂರುವ ಚಟ ಇತ್ತು. ಅವಳು ಬರುತ್ತಿದ್ದಂತೆ ಎರಡನೆಯವಳು ಕೈಚೀಲ ಹಿಡಿದು ಹೊರಟಳೇ. ಮನೆಕೆಲಸ ತಪ್ಪಿಸಿಕೊಳ್ಳಲು ಇಬ್ಬರಲ್ಲೂ ಪೈಪೋಟಿ. ಮೂರನೆಯವಳಾಗಿ ಮನೆ ಸೇರಿದ ದೇವಕಿ ಗಾಣಕ್ಕೆ ಸಿಕ್ಕಿಕೊಂಡಳು. ಕತ್ತೆ ಕೆಲಸ ಮಾಡಲು ಅವಳಿಗೆ ಉದಾಸೀನ ಇಲ್ಲ. ಆದರೆ ಮನಸ್ಸಿಗೆ ತಿಲಮಾತ್ರ ಸಂತೋಷವೆನ್ನುವುದು ಇಲ್ಲದಿದ್ದಾಗ ಬರೀ ಗೆಯ್ದುಕೊಂಡಿರು ಅಂದರೆ ಅದೊಂದು ದೊಡ್ಡ ಹೊರೆ. ನಿಧಾನಕ್ಕೆ ಇನ್ನೊಂದು ಕಾಟ ಶುರುವಾಯ್ತು. ಭೂತಾಕಾರದ ಹಳ್ಳಿ ಮನೆ. ಯಾವುದೋ ಮೂಲೆಯಲ್ಲಿ ಯಾರದ್ದೋ ಕತ್ತು ಹಿಸುಕಿದರೆ ಆ ಕಡೆ ಹೋದರಷ್ಟೇ ಗೊತ್ತಾಗುವುದು. ದೊಡ್ಡ ಬಾವ ನಾದಿನಿಯ ಹಿಂದೆ ಬಿದ್ದ. ‘ಅವನ್ನ ನಂಬ್ಕೊಂಡ್ರೆ ನಿಂಗೆ ಮಕ್ಕಳಿಲ್ಲ, ಮರಿ ಇಲ್ಲ. ಬಾ ನಂಜೊತೆ. ಸ್ವರ್ಗ ಅಂದ್ರೆ ಏನೂಂತ ತೋರಿಸ್ತೀನಿ ನಿಂಗೆ...’ ಎಂದು ಕಾಡಿಸತೊಡಗಿದ.

ಗಂಡ ಜಾಣನೋ, ಪೆದ್ದನೋ, ಜೋರಿನವನೋ, ಮೆದುಸ್ಥನೋ, ತಾಳಿ ಕಟ್ಟಿಸಿಕೊಂಡು ಜೊತೆಯಲ್ಲಿ ಬಾಳುವುದಕ್ಕೆ ಬಂದ ಮೇಲೆ ಅವನಿಗೆ ಮೋಸ ಮಾಡಲು ದೇವಕಿಯ ಸಂಪ್ರದಾಯದ ಮನಸ್ಸು ಒಪ್ಪಿಕೊಳ್ಳಲಿಲ್ಲ.

‘ತಮ್ಮನ ಹೆಂಡ್ತಿ ಅಂದ್ರೆ ತಂಗಿ ಸಮಾನ. ನೀವು ನನ್ನ ಹಿಂದೆ ಬೀಳ್ಬೇಡಿ. ನೀವೂ ಕೆಟ್ಟು, ನನ್ನನ್ನೂ ಕೆಡಿಸಿಬ್ಬೇಡಿ...’ ಕಾಲಿಗೆ ಬಿದ್ದು ಎನ್ನುವಂತೆ ಗೋಗರೆದಿದ್ದಳಂತೆ ದೇವಕಿ. ತಾಳಿ ಕಟ್ಟಿದವನು ಇದ್ದೂ ಇಲ್ಲದ ಲೆಕ್ಕ. ‘ಇವತ್ತು ನೀವು ಆಚೆ ಕೋಣೇಲಿ ಮಲಕ್ಕೊಳ್ಳಿ’ ಅಂದರೆ ಕಂಬಳಿ ಎತ್ತಿಕೊಂಡು ಹೊರಡುವಷ್ಟು ಬುದ್ಧಿವಂತ. ಕಾಪಾಡಬೇಕಾದವನೇ ಹೀಗಾದರೆ ಹೆಂಡತಿಗೆ ಯಾರು ದಿಕ್ಕು? ತೌರುಮನೆ ಸಂಬಂಧ ಕಡಿದುಕೊಂಡಿದ್ದಾಗಿದೆ. ಮತ್ತೆ ಅಲ್ಲಿಗೆ ಹೋಗಿ ಸೇರಿಕೊಳ್ಳುವ ಮನಸ್ಸಿಲ್ಲ. ಹೋದರೂ ಅವರು ಕಾಯಮ್ಮಾಗಿ ಇರಗೊಡುವುದಿಲ್ಲ. ಇನ್ನಿಲ್ಲದ

